ಹರಿಹರನ ಕಾವ್ಯಸೃಷ್ಟಿಯ ಬೀಜ ದೊರಕುವುದು ಆದ್ಯ ವಚನಕಾರ ದೇವರದಾಸಿಮಯ್ಯನಲ್ಲಿ. ಅವನ ಆಶಯಗಳು ಚಿಗುರಿ ರೆಂಬೆ ಕೊಂಬೆಯಾಗಿ ಚಾಚಿಕೊಳ್ಳುವುದು ವಚನಕಾರರ ಕಾಲಕ್ಕೆ! ಹರಿಹರ ಯಾವ ವ್ಯಕ್ತಿಗಳಿಗೆ ಧೈರ್ಯ ತುಂಬಿ ಜೀವ ನೀಡುತ್ತಾನೋ ಅವರೆಲ್ಲ ತಿಪ್ಪೇಸ್ವಾಮಿ, ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ, ಮಲೆಯ ಮಾದಪ್ಪ ಎಂಬೀ ನಾಮಧೇಯ ತಳೆದು ಓಡಾಡಿದ್ದು ಹದಿನಾರನೆಯ ಶತಮಾನದಲ್ಲಿ. ಹರಿಹರನ ಬರಹಗಳು ಫಲ ಕೊಟ್ಟದ್ದು ಕಳೆದ ಶತಮಾನದ ದಲಿತ ಹೋರಾಟಗಳಲ್ಲಿ! ಇಷ್ಟೇ ಅಲ್ಲ ಹರಿಹರನ ಕ್ಷೇತ್ರ ಸಂಚಾರ ಬರಿಯ ಹೊಯ್ಸಳ ಅರಸನಾದ ವೀರಬಲ್ಲಾಳನ ನಾಡಿನ ಸುತ್ತ ಮಾತ್ರವಲ್ಲ, ಆ ಸ್ಥಳವನ್ನು ತ್ಯಜಿಸಿ ಹಂಪೆಗೆ ಬಂದು ಅಲ್ಲಿಂದ ಅವನ ಕಾಲ ನಡಿಗೆ ತಮಿಳುನಾಡಿನತ್ತಲೂ ಪ್ರಯಾಣ ಬೆಳೆಸಿದಂತೆ ಕಂಡು ಬರುವುದನ್ನು ವಿದ್ವಾಂಸರು ಹೇಳುತ್ತಾರೆ. ಇದಕ್ಕೆ ಸಾಕ್ಷಿ ಅವನು ಬರೆದಿರುವ ತಮಿಳು ಸಂತರ ಕಥಾನಕಗಳು.

ಇದೀಗ ತಮಿಳರು ತಮ್ಮ ಪ್ರಾಚೀನ ಕಾವ್ಯಗಳೆನಿಸುವ ತಿರುಕ್ಕುರಳ್, ಮಣಿಮೇಖಲೈ, ಶಿಲಪ್ಪದಿಕಾರಂ, ತೋಲ್‌ಕಾಪ್ಪಿಯಂ ಇವುಗಳನ್ನೆಲ್ಲ ಸಾಕ್ಷಿಯಾಗಿಸಿ ತಮ್ಮದು ಆರ್ಯ ಪರಂಪರೆಯ ಸಾಹಿತ್ಯವಲ್ಲ, ದ್ರಾವಿಡ ಅಸ್ಮಿತೆಯವು ಅಂದುಕೊಳ್ಳುವುದಕ್ಕೆ ಕರ್ನಾಟಕದಿಂದಲೂ ಒಂದು ಅಂಕಿತ ಮುದ್ರೆಯನ್ನೊತ್ತಿ, ಕನ್ನಡದಲ್ಲಿಯೂ ಅದನ್ನು ಮುಂದುವರೆಸಿದವನು ಹರಿಹರ. ಈ ಹಿನ್ನೆಲೆಯಲ್ಲೇ ತಮಿಳಿನ ಶೇಕ್ಕಿಳಾರನ 'ಪೆರಿಯ ಪುರಾಣ'ದ ತಿರುನೀಲಕಂಠರು, ಇಳೆಯಾಂಡ ಗುಡಿಮಾರರು, ಇಹಪ್ಪಗೆಯಾಂಡರು, ತಿರುನಾಳ್ ಪೋವರು, ಅರಿವಾಳ್ತಾಂಡರು, ನಮಃ ಶಿವಾಯ ಮುರುಘ, ತಿರುಕುಪ್ಪೆ ತೊಂಡರು, ಮೆಱೆಮಿಂಡ ದೇವರು, ಒಲಘಾಂಡಮೂರ್ತಿ ಹೀಗೆ ಸಂತ ಸಾಮಾನ್ಯರ ಕಥೆಗಳನ್ನು ಕನ್ನಡಕ್ಕೆ ತಂದು ಇಲ್ಲಿಯೂ ದ್ರಾವಿಡ ಪರಂಪರೆಗೆ ನಾಂದಿ ಹಾಡಿದ. ಎಂ.ಎಂ. ಕಲಬುರ್ಗಿಯವರು ತಮ್ಮ ದೀರ್ಘಕಾಲೀನ ವಚನಗಳ ಅಧ್ಯಯನದ ನಂತರದಲ್ಲಿ ಇದನ್ನೇ ಪ್ರತಿಪಾದಿಸುತ್ತಿದ್ದರು.

ಎಸ್. ವಿದ್ಯಾಶಂಕರ್ ಅವರು ಹರಿಹರ ಶೇಕ್ಕಿಳಾರನಿಂದ ಆ ಕಥೆಗಳನ್ನು ಸ್ವೀಕರಿಸಲಿಲ್ಲ ಎನ್ನುತ್ತಾರೆ. ಕನ್ನಡದಲ್ಲಿ ಬಸವಣ್ಣ, ಅಲ್ಲಮ, ಅಕ್ಕಮಹಾದೇವಿಯರನ್ನು ಕುರಿತಾಗಿ ರಗಳೆಗಳನ್ನು ರಚಿಸುವಲ್ಲಿ ಅದಕ್ಕೆ ಅವನು ಯಾವ ಮೂಲಕಥೆಗಳ ಮೊರೆ ಹೊಕ್ಕಿಲ್ಲ. ಅವರ ಮೇಲೆ ಯಾವುದೇ ಪುರಾಣ ಕಥನ ಸೃಷ್ಟಿಯಾಗುವ ಮೊದಲೇ ಹರಿಹರ ಶರಣರ ಜೀವನದ ಸತ್ಯ ಸಂಗತಿಗಳೊಡನೆ ಉತ್ಪ್ರೇಕ್ಷಾ ವಿವರಗಳನ್ನು ಲಗತ್ತಿಸಿ ದೀರ್ಘ ರಗಟಾ ಕಥನಗಳನ್ನು ರಚಿಸಿದ. ಹೀಗೆಯೇ ತಮಿಳು ಬಲ್ಲವನಾಗಿದ್ದವನು ತನ್ನ ವ್ಯಾಪಕ ಕ್ಷೇತ್ರ ಕಾರ್ಯದ ಹಿನ್ನೆಲೆಯಲ್ಲಿ ಅಲ್ಲಿಯ ತೇವಾರಂಗಳನ್ನು ಓದಿಕೊಂಡು ಕನ್ನಡದಲ್ಲಿ ತಮಿಳು ಸಂತರ ಕಥೆಗಳನ್ನು ಬರೆದಿದ್ದಾನೆ ಎನ್ನುತ್ತಾರೆ ವಿದ್ಯಾಶಂಕರ್. ಆದರೆ, ಶೇಕ್ಕಿಳಾರನ ತಮಿಳು ಕೃತಿಯನ್ನು ಆಧರಿಸಿಯೇ ಕನ್ನಡದಲ್ಲಿ ರಗಳೆಗಳನ್ನು ರಚಿಸಿದ ಎನ್ನುವ ದೇವೀರಪ್ಪನವರು, ಪೆರಿಯ ಪುರಾಣದ ವಾಕ್ಯ, ಹರಿಹರನ ಕಥನ ಸಾಲುಗಳನ್ನು ಉದಾಹರಣೆಯಾಗಿ ಶರಣ ಚರಿತ ಮಾನಸ ಕೃತಿಯ ದೀರ್ಘ ಪ್ರಸ್ತಾವನೆಯಲ್ಲಿ ಕಾಣಿಸುತ್ತಾರೆ.

★★★

ಹರಿಹರನ ತಂದೆ ಮಹದೇವ ಭಟ್ಟ. ತಾಯಿ ಶರ್ವಾಣಿ, ತಂಗಿ ರುದ್ರಾಣಿ. ಈ ರುದ್ರಾಣಿಯ ಮಗನೇ ಇನ್ನೊಬ್ಬ ಪ್ರಸಿದ್ಧ ಕವಿ ರಾಘವಾಂಕ. ಈ ಸೋದರಳಿಯನಿಗೆ ಗುರು ಹರಿಹರನೇ. ಮಾಯಿದೇವ ಹರಿಹರನ ಗುರು. ಹರಿಹರನು ದ್ವಾರಸಮುದ್ರದ ಹೊಯ್ಸಳ ವೀರಬಲ್ಲಾಳನ ಆಸ್ಥಾನ ಬಿಟ್ಟು ಬಂದನೋ, ತಮಿಳುನಾಡಿನ ಶೈವ ಕ್ಷೇತ್ರಗಳನ್ನು ಸಂಚಾರ ಮಾಡಿದನೋ ಇದೇನೇ ಇದ್ದರೂ ಆತನ ಕಾರ್ಯಕ್ಷೇತ್ರ ತುಂಗಭದ್ರಾ ತೀರದ ಸುಂದರ ಪಂಪಾಕ್ಷೇತ್ರವಾಗಿತ್ತು.

ಹರಿಹರನ ಮೇಲೆ ಹಬ್ಬಿದಷ್ಟು ದಂತಕಥೆಗಳು, ಉತ್ಪ್ರೇಕ್ಷೆಯ ಸಂಗತಿಗಳು ಬೇರಾವ ಕವಿಯ